<u>ದಿನಾಂಕ **31.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ನನ್ನ ಗಂಡ ತೀರಿಕೊಂಡಾಗ ಅವರಿಗೆ 45 ವರ್ಷ ವಯಸ್ಸಾಗಿತ್ತು. ನನ್ನ ಗಂಡನ ವಯಸ್ಸನ್ನು ತೋರಿಸಲು ಅವರ ಆದಾರ್ ಕಾರ್ಡ್ ಹಾಜರುಪಡಿಸಿರುತ್ತೇನೆ. ನನ್ನ ಗಂಡನ ವಯಸ್ಸನ್ನು ತೋರಿಸುವ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮರಣ ಹೊಂದಿದ ಸಮಯದಲ್ಲಿ ಬೆಂಗಳೂರಿನಲ್ಲಿ ಕ್ಯಾಡ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಯಾವ ದಿನಾಂಕದಂದು ನನ್ನ ಗಂಡ ಕೆಲಸಕ್ಕೆ ಸೇರಿದ್ದರು ಎಂದು ಹೇಳಲಾಗುವುದಿಲ್ಲ. ಸುಮಾರು 15 ವರ್ಷಗಳಿಂದ ನನ್ನ ಗಂಡ ಕೆಲಸ ಮಾಡುತ್ತಿದ್ದರು. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಕಂಪನಿಯಿಂದ ಪಡೆದಿರುತ್ತೇನೆ. ಘಟನೆ ನಡೆದ ಸಮಯದಲ್ಲಿ ನನ್ನ ಗಂಡ ನಾನು ಹೇಳಿದ ರೀತಿಯಲ್ಲಿ ಯಾವುದೇ ಕಂಪನಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾನು ಹೇಳಿದ ರೀತಿಯಲ್ಲಿ ನನ್ನ ಗಂಡ ತಿಂಗಳಿಗೆ 1,85,000/- ಸಂಬಳವನ್ನು ಪಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಅಪಘಾತದ ದಿನ ಕೆಲಸ ಮಾಡಿದ ಬಗ್ಗೆ ದಾಖಲೆಹಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ಗಂಡನ ಮೃತಪಡುವವರೆಗೆ ಸಂಸ್ಥೆಗಳಲ್ಲಿ ಕೆಲಸ ಮಾಡಿದ ಬಗ್ಗೆ ವೇತನದ ದೃಡೀಕರಣ ಪತ್ರವನ್ನು ನಾನು ಹಾಜರುಪಡಿಸಿಲ್ಲ ಎಂದರೆ ದಾಖಲೆಗಳಲ್ಲಿ ಕಂಡುಬರುವುದಿಲ್ಲ. ಘಟನೆಯ ಸಮಯದಲ್ಲಿ ಕರೋನ ಕಾಯಿಲೆ ಇತ್ತು ಎಂದರೆ ಸರಿ. ಆ ಸಮಯದಲ್ಲೇ ನನ್ನ ಗಂಡ ತೋಟಕ್ಕೆ ಹೋಗಿದ್ದರು ಎಂದರೆ ಸರಿ. ನಮ್ಮ ತೋಟಕ್ಕೆ ನೀರಾವರಿ ಸಂಪರ್ಕಕ್ಕೆ ಹೊಸದಾಗಿ ವಿದ್ಯುತ್ ಸಂಪರ್ಕ ಪಡೆಯಲಾಗಿತ್ತು. ಅದು ಹೊಸ ಸಂಪರ್ಕ ಆಗಿತ್ತು. ಆ ವಿದ್ಯುತ್ ಸಂಪರ್ಕಕ್ಕೆ ಐಸಿ ಸಂಖ್ಯೆ ಇರುತ್ತದೆ. ಹೊಸ ಸಂಪರ್ಕ ತೆಗೆದುಕೊಂಡಾಗ ಎಲ್ಲಾ ಹೊಸ ವಸ್ತುಗಳನ್ನು ಹಾಕಿರುತ್ತಾರೆ ಎಂದರೆ ಕೆಲವು ಹಳೆ ವಸ್ತುಗಳನ್ನು ಹಾಕಿರುತ್ತಾರೆ. ಆ

ಸಂಪರ್ಕಕ್ಕೆ ವಿತ್ ಇನ್ಸೂಲಿನ್ ಮತ್ತು ವಿತೌಟ್ ಇನ್ಸೂಲಿನ್ ವೈಯರನ್ನು ಹಾಕಿದ್ದರು. ಆ ವಿಷಯಕ್ಕೆ ಸಂಬಂಧಿಸಿದಂತೆ ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ಘಟನೆ ನಡೆದ ಸ್ಥಳದಿಂದ ಐಪಿ ಸೆಟ್ ಸ್ಥಾವರಕ್ಕೂ ಎಷ್ಟು ದೂರ ಇದೆ ಎಂದು ಹೇಳಲಾಗುವುದಿಲ್ಲ. ಅಪಘಾತವು ವಿದ್ಯುತ್ ಕಂಬದಿಂದ ಐಪಿ ಸೆಟ್ ಸಂಪರ್ಕದ ಮದ್ಯೆ ಆಗಿರುತ್ತದೆ. ಆ ಮದ್ಯದಲ್ಲಿ ಯಾವ ವೈಯರ್ ಗಳನ್ನು ಹಾಕಿರುತ್ತಾರೆ ಎಂದು ಗೊತ್ತಿಲ್ಲ. ಆ ವೈಯರ್ ಗಳನ್ನು ಯಾವ ಆದಾರದಲ್ಲಿ ಹಾಕಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ಗಂಡ ತೀರಿಕೊಂಡ ಬಗ್ಗೆ ನಾನು ಮತ್ತು ಸ್ಥಳದಲ್ಲಿ ಇದ್ದವರು ದೂರು ನೀಡಿರುತ್ತೇವೆ. ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಮತ್ತು ನಾನು ಮಾಹಿತಿ ನೀಡಿರುತ್ತೇನೆ. ವಿದ್ಯುತ್ ಇಲಾಖೆಯಿಂದ ಹೊಸದಾಗಿ ಸಂಪರ್ಕ ಕಲ್ಪಿಸಿದ ನಂತರ ಆ ವೈಯರ್ ನ ಮೇಲೆ ಹೆಡೆಮಟ್ಟೆ ಬಿದಿದ್ದುದ್ದು ನನ್ನ ಗಂಡ ವಿದ್ಯಾವಂತರಾಗಿದ್ದರೂ ಸಹ ಅದನ್ನು ಇಲಾಖೆಗೆ ಮಾಹಿತಿ ನೀಡದೇ ನನ್ನ ಗಂಡನೇ ಅದನ್ನು ಮುಟ್ಟಿ ವಿದ್ಯುತ್ ಅಪಘಾತ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಕ್ರಮ ಸಕ್ರಮ ಸಂಪರ್ಕ ಪಡೆಯುವಾಗ ಪ್ರಮಾಣ ಪತ್ರದಲ್ಲಿ ವಿದ್ಯುತ್ ಸಂಪರ್ಕಾದ ವಿಚಾರದಲ್ಲಿ ಯಾವುದೇ ತೊಂದರೆ ಉಂಟಾದಲ್ಲಿ ಅದನ್ನು ಇಲಾಖೆಗೆ ಮಾಹಿತಿ ನೀಡಬೇಕು ಎಂದು ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭಪಡೆಯಲು ಸುಳ್ಳು ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಪ್ಪಿನಿಂದ ಯಾವುದೇ ಅವಗಡ ಆಗಿಲ್ಲ ಎಂದರೆ ಸರಿಯಲ್ಲ.

ನಿಪಿ-18 ಮತ್ತು 19ರ ದಾಖಲೆಗಳನ್ನು ನಾನೇ ಸೃಷ್ಟಿಮಾಡಿಕೊಂಡು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-18 ಮತ್ತು 19ರ ದಾಖಲೆಯ ಆದಾರದಲ್ಲಿ ನನ್ನ ಗಂಡನಿಗೆ ಸಂಬಳ ಇತ್ತು ಎಂದು ಕೇಳಿರುತ್ತೇನೆ. ನಿಪಿ-18 ರ ಪ್ರಕಾರ ವಾರ್ಷಿಕ 8 ಲಕ್ಷ

ಆದಾಯ ಇರುತ್ತದೆ. ಅದರ ಪ್ರಕಾರ ನನ್ನ ಗಂಡನಿಗೆ ಮೂಲ ಸಂಬಳ 27 ಸಾವಿರ ಎಂದರೆ ಸರಿ. ನಿಪಿ-19 ರ ಪ್ರಕಾರ ನನ್ನ ಗಂಡನಿಗೆ 1,80,000/- ಸಂಬಳ ಬರುತ್ತಿತ್ತು. ಸಂಬಳ ನನ್ನ ಗಂಡನ ಖಾತೆಗೆ ಬಂದ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ. ಸಂಬಳದ ಬಗ್ಗೆ ಮತ್ತು ನನ್ನ ಗಂಡ ಕೆಲಸ ಮಾಡುತ್ತಿದ್ದ ಬಗ್ಗೆ ಸಂಸ್ಥೆಯ ಕಡೆಯಿಂದ ಸಾಕ್ಷಿ ನೀಡಲು ಯಾವುದೇ ತೊಂದರೆ ಇಲ್ಲ.

ನಿಪಿ-32 ನ್ನು ಯಾವುದೇ ಸೂಕ್ತ ದಾಖಲೆ ಇಲ್ಲದೇ ನನ್ನ ಗಂಡನ ಸಂಬಳದ ಬಗ್ಗೆ ಆದಾಯ ಇಲಾಖೆಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-32 ರಲ್ಲಿ ನನ್ನ ಗಂಡ ಸಂಬಳ ಪಡೆದು ಆದಾಯ ತೆರಿಗೆ ಪಾವತಿಸಿರುವುದು ಕಂಡುಬಂದಿಲ್ಲ ಎಂದರೆ ಸರಿಯಲ್ಲ. ನಿಪಿ-17 ರಲ್ಲಿ ಪ್ರತಿವಾದಿಗಳ ನಿರ್ಲಕ್ಷ್ಯತನದಿಂದ ವಿದ್ಯುತ್ ಅವಘಟ ಆಗಿರುತ್ತದೆ ಎಂದು ವರದಿ ನೀಡಿಲ್ಲ ಎಂದರೆ ಸರಿಯಲ್ಲ. ರಂಗಮ್ಮ ನನ್ನ ಅತ್ತೆ. ಅವರು ಪ್ರತ್ಯೇಕ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಇಬ್ಬರೂ ಒಂದೇ ಪರಿಹಾರ ಕೇಳುತ್ತಿದ್ದೇನೆ ಎಂದರೆ ಸರಿ. ಪರಿಹಾರದಲ್ಲಿ ನನ್ನ ಅತ್ತೆಗೂ ಪರಿಹಾರ ಪಡೆಯಲು ನನ್ನ ಯಾವುದೇ ತಕರಾರು ಇರುವುದಿಲ್ಲ. ತಿಥಿ ಕಾರ್ಯ ಮಾಡಿದ ಖರ್ಚಿನ ಬಗ್ಗೆ ದಾಖಲೆ ನೀಡಿಲ್ಲ. ಆ ರೀತಿ ನಾವು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಛಾಯಚಿತ್ರಗಳನ್ನು ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಘಟನಾ ಸ್ಥಳದ ಛಾಯಚಿತ್ರಗಳನ್ನು ಹಾಜರುಪಡಿಸಿದರೆ ವಸ್ತುಸ್ಥಿತಿ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಛಾಯಚಿತ್ರಗಳ ಪ್ರಕಾರ ಸ್ಥಳದಲ್ಲಿ ಹೊಸ ವೈಯರ್ ಗಳನ್ನು ಹಾಕಲಾಗಿತ್ತು ಎಂದರೆ ಸರಿಯಲ್ಲ.

ಅಪಘಾತ ಸಂಬವಿಸಿದ್ದಲ್ಲಿ ಪ್ರತಿವಾದಿಗಳಿಗೆ ಮಾಹಿತಿ ನೀಡಿದ ನಂತರ ಸ್ಥಳದಿಂದ ಶವವನ್ನು ತೆಗೆಯಬೇಕು ಎಂದರೆ ಆಸ್ಪತ್ರೆಗೆ ತುರ್ತಾಗಿ ತೆಗೆದುಕೊಂಡು ಹೋಗುವ ಕಾರಣ ಕರೆದುಕೊಂಡು ಹೋಗಿರುತ್ತೇವೆ. ಸ್ಥಳದಲ್ಲಿ ಇದ್ದರೆ ಗೊತ್ತಾಗುತ್ತದೆ ಎಂದು ತಕ್ಷಣವೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದ

ರೀತಿಯಲ್ಲಿ ಹಳೆಯ ಸೇವಾ ಮಾರ್ಗವನ್ನು ಪ್ರತಿವಾದಿಗಳು ನೀಡಿಲ್ಲ ಹೊಸ ಸೇವಾ ಮಾರ್ಗವನ್ನು ನೀಡಿದ್ದರು ಎಂದರೆ ಸರಿಯಲ್ಲ. ಮಾನವೀಯತೆಯ ದೃಷ್ಟಿಯಿಂದ 5 ಲಕ್ಷ ಪರಿಹಾರ ನೀಡಿರುತ್ತಾರೆ ಎಂದರೆ ಸರಿ. ಹಣ ಪಡೆಯುವಾಗ ನನ್ನ ತಕರಾರನ್ನು ಬರೆದಿರುತ್ತೇನೆ. ಅಕ್ರಮವಾಗಿ ಹಣ ಪಡೆಯಲು ನೈಜ ವಿಚಾರ ಮರೆಮಾಚಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವುದೇ ಪರಿಹಾರ ನೀಡಲು ಭಾದ್ಯಸ್ಥರು ಎಂದರೆ ಸರಿಯಲ್ಲ. ಯಾವುದೇ ಆದಾರ ಇಲ್ಲದೇ ಪರಿಹಾರ ಕೇಳಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆಸ ರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.